## ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ–1611/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 04/04/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀ ಎನ್. ಪ್ರಸನ್ನ ಮೂರ್ತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೈಲಹೊಂಗಲ ಉಪವಿಭಾಗ, ಬೈಲಹೊಂಗಲ, ಬೆಳಗಾವಿ ಜಿಲ್ಲೆ, ಪ್ರಸ್ತುತ ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವಿಭಾಗ, ಬೆಳಗಾವಿ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*–*–*

ಪ್ರಕರಣದ ದೂರುದಾರರಾದ ಶ್ರೀ ಮಹದೇವಪ್ಪ ಶಿವಲಿಂಗಪ್ಪ ಯಾದವಾಡ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ ಬೆಳಗಾವಿ ಜಿಲ್ಲೆಯ ರಾಮದುರ್ಗ ಪಟ್ಟಣ ಹಾಗೂ ಸದರಿ ಪಟ್ಟಣಕ್ಕೆ ಬರುವ ಮಾರ್ಗ ಮಧ್ಯದ 13 ಹಳ್ಳಿಗಳಿಗೆ ನೀರು ಸರಬರಾಜು ಮಾಡುವ ಸಲುವಾಗಿ ರೇಣುಕಾ ಸಾಗರ ಜಲಾಶಯದಿಂದ ನೀರು ಸರಬರಾಜು ಮಾಡಲು ಪೈಪ್‌ಗಳನ್ನು ಅಳವಡಿಸಬೇಕಾಗಿದ್ದು, ಕೆ.ಜುನಿಪೇಟ–ಕೋಣಗನೂರು–ಬಸರಗಿ ರಸ್ತೆಯಲ್ಲಿ ಯೋಜನಾ ಷರತ್ತುಗಳ ಪ್ರಕಾರ 4.50 ಮೀ., ಅಂತರದಲ್ಲಿ (ರಸ್ತೆ ಮಧ್ಯದಿಂದ 4.50 ಮೀ., ಅಂತರದಲ್ಲಿ) ಪೈಪ್ ಅನ್ನು ಅಳವಡಿಸಬೇಕಾಗಿರುತ್ತದೆ. ಆದರೆ, ಪೈಪ್‌ಗಳನ್ನು 2 ರಿಂದ 3.00 ಮೀ., ಅಂತರದಲ್ಲಿ ಅಳವಡಿಸಲಾಗುತ್ತಿದೆ. ಅದೇ ರೀತಿ ಯರಗಟ್ಟಿ–ಮುಧೋಳ ರಾಜ್ಯ ಹೆದ್ದಾರಿಯ ಮಧ್ಯದಿಂದ 6.00 ಮೀ., ಅಂತರದಲ್ಲಿ ನೀರಿನ ಪೈಪ್‌ಅನ್ನು ಅಳವಡಿಸಬೇಕಾಗಿದ್ದು, ಆದರೆ, 3.00 ರಿಂದ 4.00 ಮೀ., ಅಂತರದಲ್ಲಿ ಪೈಪ್‌ಗಳನ್ನು ಅಳವಡಿಸಲಾಗುತ್ತಿದೆ. ಹಾಗೆಯೇ ಮುನವಳ್ಳಿ–ಕೋಟಾ ಮುಚಗಿ ರಾಜ್ಯ ಹೆದ್ದಾರಿಯಲ್ಲಿ 6.00 ಮೀ., ಅಂತರದಲ್ಲಿ ಪೈಪ್‌ಗಳನ್ನು ಅಳವಡಿಸಬೇಕಾಗಿದು, ನಿಗಧಿತ ಅಂತರದಲ್ಲಿ ಪೈಪ್‌ಗಳನ್ನು ಅಳವಡಿಸುತ್ತಿಲ್ಲ. ಈ ರಸ್ತೆಗಳಲ್ಲಿ ದಿನನಿತ್ಯ 40 ಟನ್ ಭಾರದ ಟ್ರಕ್ಕುಗಳು ಓಡಾಡುವುದರಿಂದ, ಸದರಿ ಪೈಪ್‌ಗಳು ಬೇಗ ಹಾಳಾಗುತ್ತದೆ. ಇದಲ್ಲದೇ ರಾಜ್ಯ ಹೆದ್ದಾರಿ ಸಂ:83ರ ಅಗಲೀಕರಣ ಕಾಮಗಾರಿ ಕೈಗೊಳ್ಳುವುದಿದ್ದು, ಇದರಿಂದಲೂ ಸದರಿ ರಸ್ತೆಯ ಪಕ್ಕದಲ್ಲಿ ಅಳವಡಿಸಿರುವ ಪೈಪ್‌ಗಳು ಹಾಳಾಗುತ್ತದೆ. ಇದರಿಂದ, ಸರ್ಕಾರದ ಬೊಕ್ಕಸಕ್ಕೆ ಹಣ ನಷ್ಟವಾಗುತ್ತದೆ. ಈ

ಕುರಿತು ಸಂಬಂಧಪಟ್ಟ ಇಲಾಖೆಯ ಗಮನ ಸೆಳೆಯಲಾಗಿದ್ದರೂ, ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ರೇಣುಕಾ ಸಾಗರ ಜಲಾಶಯದಿಂದ ರಾಮದುರ್ಗ ಪಟ್ಟಣಕ್ಕೆ ಹಾಗೂ ಮಾರ್ಗ ಮಧ್ಯದ 13 ಹಳ್ಳಿಗಳಿಗೆ ನೀರು ಸರಬರಾಜು ಮಾಡುವ ಸಲುವಾಗಿ ಕರ್ನಾಟಕ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ, ಬೆಳಗಾವಿ ಇವರೊಡನೆ ರಾಮದುರ್ಗ ಪಟ್ಟಣದವರು ಒಪ್ಪಂದವನ್ನು ಮಾಡಿಕೊಂಡಿದ್ದು, ಸದರಿ ಕಾಮಗಾರಿಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯವರು ತಾಂತ್ರಿಕ ಮಂಜೂರಾತಿಯನ್ನು ನೀಡಿರುತ್ತಾರೆ. ಇದಕ್ಕೆ ಕರ್ನಾಟಕ ಸರ್ಕಾರವು ದಿ:08/11/2013ರ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿರುತ್ತದೆ. ಅದರಂತೆ, ಸದರಿ ಕಾಮಗಾರಿಗೆ ಟೆಂಡರ್ ಅನ್ನು ಕರೆಯಲಾಗಿದ್ದು, ಮೆ. ಶೇತ್ ಮತ್ತು ಸೂರ ಇಂಜಿನಿಯರ್ಸ್ ಪ್ರೈವೇಟ್ ಲಿಮಿಟೆಡ್, ಪೂನೆ ಇವರಿಗೆ ಕಾಮಗಾರಿಯ ಗುತ್ತಿಗೆಯನ್ನು ನೀಡಲಾಗಿರುತ್ತದೆ. ದಿ:13/12/2013 ಮತ್ತು 17/12/2013 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಉಪವಿಭಾಗ, ರಾಮದುರ್ಗ ಇವರಿಗೆ ಪತ್ರವನ್ನು ಬರೆದು, ಮೇಲೆ ಹೇಳಿದ ಕಾಮಗಾರಿಗೆ ಸಂಬಂಧಿಸಿದಂತೆ ರಸ್ತೆ ಬದಿಯಲ್ಲಿ ಪೈಪ್‌ಗಳನ್ನು ಅಳವಡಿಸುತ್ತಿರುವುದರಿಂದ, ಸದರಿ ರಸ್ತೆಯ ಮಧ್ಯ ಭಾಗದಿಂದ ಎಷ್ಟು ಅಂತರದಲ್ಲಿ ಪೈಪ್ ಅನ್ನು ಹಾಕಬಹುದೆಂಬ ಬಗ್ಗೆ ಗುರುತು ಮಾಡಿಕೊಡಬೇಕೆಂದು ಕೋರಲಾಗಿದ್ದು, ಹಾಗೆಯೇ ರಸ್ತೆಯ ಬದಿಯಲ್ಲಿ ಪೈಪ್‌ಗಳನ್ನು ಹಾಕಲು ಅನುಮತಿ ನೀಡಬೇಕೆಂದು ಕೋರಲಾಗಿತ್ತು. ಹಾಗೆಯೇ ದಿ:06/03/2014 ರಂದು ಪತ್ರ ಬರೆದು, ಪೈಪ್ ಅನ್ನು ಹಾಕುವ ಮಾರ್ಗದ ಸ್ಕೆಚ್ ಅನ್ನು ಅಳವಡಿಸಿ ಅನುಮತಿ ನೀಡಲು ಕೋರಿ ಪತ್ರ ಬರೆಯಲಾಗಿತ್ತು.

3. ಇದಲ್ಲದೇ, ದಿ:14/05/2015 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸವದತ್ತಿ ಇವರಿಗೆ ಪತ್ರ ಬರೆದು ರಸ್ತೆ ಬದಿಯಲ್ಲಿ ಕುಡಿಯುವ ನೀರಿನ ಪೈಪ್‌ಗಳನ್ನು ಅಳವಡಿಸಲು ಅನುಮತಿ ಕೋರಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ದಿ:14/05/2015 ರಂದು ವಲಯ ಅರಣ್ಯಾಧಿಕಾರಿಗಳು, ರಾಮದುರ್ಗ ಇವರಿಗೆ ಪತ್ರವನ್ನು ಬರೆದು, ಸದರಿಯವರಿಂದ ರಾಮದುರ್ಗ ವಲಯದಲ್ಲಿ ಪೈಪ್‌ಲೈನ್‌ಗಳನ್ನು ಹಾಕುವಾಗ ನವಿಲು ತೀರ್ಥದಿಂದ

ರಾಮದುರ್ಗದ ಪಟ್ಟಣದ ಮಧ್ಯದಲ್ಲಿ ಪೈಪ್ ಲೈನ್‌ಗಳನ್ನು ಹಾಕಲು ಆರ್‌ಸಿಸಿ ಪಿಲ್ಲರ್‌ಗಳನ್ನು ರಚಿಸಲು ಅನುಮತಿ ಕೋರಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಈ ರೀತಿ ಎಲ್ಲ ಸಂಬಂಧಪಟ್ಟ ಪಿಡಬ್ಲ್ಯೂಡಿ, ಅರಣ್ಯ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತಿಗಳಿಗೆ ಪತ್ರ ಬರೆದು ಅನುಮತಿಯನ್ನು ಕೇಳಲಾಗಿದ್ದು, ಈ ಯೋಜನೆಯಡಿಯಲ್ಲಿ ರಾಮದುರ್ಗ ಹಾಗೂ 13 ಗ್ರಾಮಗಳಿಗೆ ನೀರು ಸರಬರಾಜು ಮಾಡುವ ಕಾರ್ಯಕ್ರಮವನ್ನು ತೀವ್ರಗತಿಯಲ್ಲಿ ಕೈಗೊಳ್ಳಬೇಕಾಗಿದ್ದರಿಂದ ಹಾಗೂ ಪೈಪುಗಳನ್ನು ಹಾಕುವ ಜಾಗದ ಅಕ್ಕಪಕ್ಕದ ಜಮೀನುಗಳು ಖಾಸಗಿ ವ್ಯಕ್ತಿಗಳಿಗೆ ಸೇರಿದ್ದರಿಂದ ಮತ್ತು ಸದರಿ ಖಾಸಗಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಕ್ರಮ ಜರುಗಿಸಲು ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಗೆ ಅಧಿಕಾರ ವ್ಯಾಪ್ತಿ ಇಲ್ಲದೇ ಇದ್ದಿದ್ದರಿಂದ ಹಾಗೂ ಸದರಿ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು ಯೋಜನೆಯನ್ನು ಅನುಷ್ಠಾನಗೊಳಿಸುವ ಏಜೆನ್ಸಿಯಾಗಿದ್ದು, ಸದರಿ ಯೋಜನೆಯನ್ನು ರಾಮದುರ್ಗದ ಪುರಸಭೆಯವರಿಗೆ ಹಾಗೂ ಸಂಬಂಧಪಟ್ಟ ಗ್ರಾಮ ಪಂಚಾಯತಿಯವರಿಗೆ ಅನುಷ್ಠಾನಗೊಳಿಸಿಕೊಡಬೇಕಾಗಿದ್ದರಿಂದ, ಈ ಯೋಜನೆಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಇದರಲ್ಲಿ ಯಾವುದೇ ದುರುದ್ದೇಶವಿರುವುದಿಲ್ಲ ಹಾಗೂ ಹಣದ ಯಾವುದೇ ಅವ್ಯವಹಾರ ಮಾಡಿರುವುದಿಲ್ಲ. ಪೈಪುಗಳನ್ನು ಅಳವಡಿಸುವ ಸಮಯದಲ್ಲಿ ರಸ್ತೆಯ ಮಧ್ಯ ಭಾಗದಿಂದ ನಿಗಧಿತ 4.50 ಮೀ., ನಿಂದ 6.00 ಮೀ., ವರೆಗಿನ ಅಂತರವನ್ನು ಮೇಲೆ ಹೇಳಿದ ಕಾರಣಕ್ಕೆ ಅಳವಡಿಸಿಕೊಳ್ಳಲಾಗಿರುವುದಿಲ್ಲ. ಭೂಸ್ವಾಧೀನಗೊಳಿಸುವ ಪ್ರಕ್ರಿಯೆಯನ್ನು ಸಂಬಂಧಪಟ್ಟ ರಾಮದುರ್ಗದ ಪುರಸಭೆಯವರಾಗಲೀ ಅಥವಾ ಜಿಲ್ಲಾ ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯವರಾಗಲೀ ಬೇಕಾಗಿದ್ದ ಜಾಗವನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ಜರುಗಿಸಿ ನಂತರ ಭೂಮಿಯನ್ನು ತಮ್ಮ ವಶಕ್ಕೆ ನೀಡಿದಿದ್ದಲ್ಲಿ, ತಾವು ಅದರಂತೆ, ರಸ್ತೆಯಿಂದ ನಿಗಧಿತ ಅಂತರವನ್ನು ಕಾಯ್ದುಕೊಂಡು ಪೈಪ್ ಲೈನ್‌ಅನ್ನು ಅಳವಡಿಸಬಹುದಾಗಿದ್ದು, ಆದರೆ, ಈ ಅಧಿಕಾರ ತಮ್ಮಲ್ಲಿ ಇಲ್ಲದೇ ಇದ್ದ ಕಾರಣ ಹಾಗೂ ತಾವು ಕರ್ನಾಟಕ ಸರ್ಕಾರದ ಪರವಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದ ಕಾರಣ, ದೂರುದಾರರು ತಿಳಿಸಿರುವಂತೆ ಹಾಗೂ ಪಿಡಬ್ಲ್ಯೂಡಿ ಇಲಾಖೆಯವರು ತಿಳಿಸಿದಂತೆ ನಿಗಧಿತ ಅಂತರವನ್ನು ಅಂದರೆ ರಸ್ತೆಯ ಮಧ್ಯದಿಂದ 4.50 ಮೀ., ನಿಂದ 6.00 ಮೀ., ವರೆಗಿನ ಅಂತರವನ್ನು ಕಾಯ್ದುಕೊಳ್ಳಲು, ಮೇಲೆ ಹೇಳಿದ ಕಾರಣಗಳಿಗೆ ಕೆಲವು ಭಾಗದಲ್ಲಿ ಮಾತ್ರ ಕಾಯ್ದುಕೊಂಡು ಹೋಗಲು ಸಾಧ್ಯವಾಗಿರುವುದಿಲ್ಲ. ಮಾನ್ಯ ಸರ್ಕಾರವಾಗಲೀ ಅಥವಾ ರಾಮದುರ್ಗದ ಪುರಸಭೆಯವರಾಗಲೀ ಅಥವಾ ಜಿಲ್ಲಾ ಪಂಚಾಯತಿಯವರಾಗಲೀ ಯೋಜನೆಯ ಅನುಷ್ಠಾನವನ್ನು ತಡೆಹಿಡಿಯಬೇಕೆಂದು ಆದೇಶ ಮಾಡದ ಕಾರಣ ಯೋಜನೆಯ ಅನುಷ್ಠಾನಗೊಳಿಸುವಲ್ಲಿ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು ತನ್ನ ಕಾರ್ಯಕ್ರಮವನ್ನು

ಮುಂದುವರೆಸಿಕೊಂಡು ಹೋಗಿರುತ್ತದೆ. ಈಗಾಗಲೇ ಯೋಜನೆಯ ಬಹುಭಾಗ ಅನುಷ್ಠಾನಗೊಳಿಸಿರುವುದರಿಂದ (ಶೇ.80 ರಷ್ಟು ಅನುಷ್ಠಾನಗೊಳಿಸಲಾಗಿದೆ) ಹಾಗೂ ಜಮೀನುಗಳ ಭೂಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಸ್ಥಳೀಯ ರಾಮದುರ್ಗದ ಪುರಸಭೆಯವರಾಗಲೀ ತಾಲ್ಲೂಕು ಪಂಚಾಯತಿಯವರಾಗಲೀ ಅಥವಾ ಜಿಲ್ಲಾ ಪಂಚಾಯತಿಯವರಾಗಲೀ ಕ್ರಮ ಕೈಗೊಳ್ಳಬೇಕಾಗಿದ್ದರಿಂದ, ತಮ್ಮ ಸಂಸ್ಥೆಯಿಂದ ಯಾವುದೇ ನಿರ್ಲಕ್ಷತನವಾಗಲೀ, ಕರ್ತವ್ಯಲೋಪವಾಗಲೀ ಎಸಗಿರುವುದಿಲ್ಲ. ಆದ್ದರಿಂದ, ಪ್ರಕರಣವನ್ನು ಕೈಬಿಡಲು ಕೋರಿರುತ್ತಾರೆ.

4. ಸದರಿ ಎದುರುದಾರರ ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ಎದುರುದಾರರು ಸವದತ್ತಿ ಹಾಗೂ ರಾಮದುರ್ಗದ ಪಿಡಬ್ಲ್ಯೂಡಿ ಇಲಾಖೆಯ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಂದ ಹಾಗೆಯೇ ವಲಯ ಅರಣ್ಯಾಧಿಕಾರಿ, ರಾಮದುರ್ಗ, ಜಿಲ್ಲಾ ಪಂಚಾಯತಿ, ಬೆಳಗಾವಿ ಇವರಿಂದ ರಸ್ತೆ ಬದಿಯಲ್ಲಿ ಪೈಪುಗಳನ್ನು ಅಳವಡಿಸಲು ಅನುಮತಿ ಕೇಳಿ ಪತ್ರ ಬರೆದಿರುತ್ತಾರೆ. ಸ್ಥಳೀಯ ಸಂಸ್ಥೆಯವರು ಈ ಯೋಜನೆಯ ಅನುಷ್ಠಾನಕ್ಕೆ ಎದುರುದಾರರ ಸಂಸ್ಥೆಗೆ ಜವಾಬ್ದಾರಿಯನ್ನು ವಹಿಸಿದ್ದೇ ಆಗಿದ್ದಲ್ಲಿ, ಸದರಿ ಯೋಜನೆಯ ಅನುಷ್ಠಾನದಲ್ಲಿ ಮೇಲೆ ಹೇಳಿದ ಸಂಸ್ಥೆಗಳಿಂದ ಅನುಮತಿ ಪಡೆಯುವ ಔಚಿತ್ಯವೇನಿರುತ್ತದೆ ಎಂದು ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುವುದಿಲ್ಲ. ಆದ್ದರಿಂದ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುವ ಅಂಶವನ್ನು ಒಪ್ಪುವಂತಹುದಲ್ಲವೆಂದು ತಿಳಿಸಿರುತ್ತಾರೆ.

5. ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಗಳನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಶೀಲಿಸಿದಲ್ಲಿ, ಕೇಂದ್ರ ಸರ್ಕಾರದ ನೀರು ಸರಬರಾಜು ಯೋಜನೆಯನ್ನು ರಾಮದುರ್ಗ ಪಟ್ಟಣ ಹಾಗೂ ಮಾರ್ಗ ಮಧ್ಯದ 13 ಹಳ್ಳಿಗಳಿಗೆ ರೇಣುಕಾ ಜಲಾಶಯದಿಂದ ನೀರು ಸರಬರಾಜು ಯೋಜನೆಯಡಿಯಲ್ಲಿ ಏರು ಕೊಳವೆ ಮಾರ್ಗ ಅಳವಡಿಸಲು ಯೋಜನೆಯನ್ನು ರಚಿಸಿದ್ದು, ಅದರಂತೆ, ಸದರಿ ಯೋಜನೆಗೆ ರೂ.67.00 ಕೋಟಿ ನಿಗಧಿಪಡಿಸಲಾಗಿದ್ದು, ಸದರಿ ಯೋಜನೆಯನ್ನು ಮಾರ್ಚ್ 2017ರವರೆಗೆ ಪೂರ್ತಿಗೊಳಿಸುವ ಗುರಿಯನ್ನು ಹೊಂದಲಾಗಿರುತ್ತದೆ. ಸದರಿ ಯೋಜನೆಯಡಿಯಲ್ಲಿ ಎದುರುದಾರರು ತಿಳಿಸಿರುವಂತೆ ಶೇ.80 ರಷ್ಟು ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುತ್ತದೆ ಎಂದು ಹಾಗೂ ಸದರಿ ಕಾಮಗಾರಿಗೆ ರಸ್ತೆಯ ಬದಿಯಲ್ಲಿ ಪೈಪ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ಕರ್ನಾಟಕ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯಿಂದ ಗುತ್ತಿಗೆಯನ್ನು ಟೆಂಡರ್ ಕರೆದು ಮೆ. ಶೇತ್ ಅಂಡ್ ಸೂರ ಇಂಜಿನಿಯರ್ಸ್ ಪ್ರೈವೇಟ್ ಲಿಮಿಟೆಡ್, ಪೂನೆ ರವರಿಗೆ ವಹಿಸಲಾಗಿರುತ್ತದೆ ಎಂದು ಕಂಡು ಬರುತ್ತದೆ.

6. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಕೆ.ಜುನಿಪೇಟ – ಗೋಣಗನೂರು – ಬಸರಗಿ ರಸ್ತೆಯಲ್ಲಿ ರಸ್ತೆ ಮಧ್ಯದಿಂದ 4.50 ಮೀ., ಅಂತರದಲ್ಲಿ ಮೇಲೆ ಹೇಳಿದ ಯೋಜನೆಯ ನೀರು ಸರಬರಾಜು ಪೈಪುಗಳನ್ನು ಅಳವಡಿಸಬೇಕಾಗಿರುತ್ತದೆ. ಹಾಗೆಯೇ ಎರಗಟ್ಟಿ–ಮುಧೋಳ ರಾಜ್ಯ ಹೆದ್ದಾರಿ ಮಧ್ಯದಿಂದ 6.00 ಮೀ., ಅಂತರದಲ್ಲಿ ಸದರಿ ಯೋಜನೆಯ ನೀರಿನ ಪೈಪ್‌ಗಳನ್ನು ಅಳವಡಿಸಬೇಕಾಗಿರುತ್ತದೆ. ಇದಲ್ಲದೇ, ಮುನವಳ್ಳಿ–ಕೋಟಮುಚಗಿ ರಾಜ್ಯ ಹೆದ್ದಾರಿ ಮಧ್ಯದಿಂದ ರಸ್ತೆಯ ಪಕ್ಕದಲ್ಲಿ 6.00 ಮೀ., ಅಂತರದಲ್ಲಿ ಪೈಪ್‌ಅನ್ನು ಅಳವಡಿಸಬೇಕಾಗಿರುತ್ತದೆ. ಈ ಬಗ್ಗೆ ಪಿಡಬ್ಲ್ಯೂಡಿ ಯಿಂದ ಎದುರುದಾರರಿಗೆ ಮಾಹಿತಿಯನ್ನು ನೀಡಲಾಗಿರುತ್ತದೆ. ಆದರೆ, ಎದುರುದಾರರು ಸದರಿ ರಸ್ತೆಯ ಮಧ್ಯದಿಂದ ಮೇಲೆ ಹೇಳಿದ ಅಂತರದಲ್ಲಿ ಪೈಪ್‌ಗಳನ್ನು ಅಳವಡಿಸಲು ಜಮೀನುಗಳನ್ನು ಸ್ಥಳೀಯ ಸಂಸ್ಥೆಯವರಾಗಲೀ, ಸರ್ಕಾರದವರಾಗಲೀ ತಮ್ಮ ವಶಕ್ಕೆ ನೀಡದ ಕಾರಣ ತಾವು ಲಭ್ಯವಿದ್ದ ಜಾಗದಲ್ಲೇ ಪಿಡಬ್ಲ್ಯೂಡಿ ಇಲಾಖೆ, ಅರಣ್ಯ ಇಲಾಖೆ ಹಾಗೂ ಜಿಲ್ಲಾ ಪಂಚಾಯತ್‌ರವರ ಗಮನಕ್ಕೆ ತಂದು ಪೈಪ್‌ಗಳನ್ನು ಅಳವಡಿಸಿರುವುದಾಗಿ ತಿಳಿಸಿರುತ್ತಾರೆ. ಹಾಗೆಯೇ ತಾವು ನಿರ್ವಹಿಸಿದ ಕಾರ್ಯವು ಸರ್ಕಾರಿ ಕೆಲಸವಾಗಿರುತ್ತದೆ ಎಂದು ಮತ್ತು ತುರ್ತಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸಿ ಸಂಪೂರ್ಣಗೊಳಿಸಬೇಕಾಗಿದ್ದ ಕಾರಣ ಮತ್ತು ಈ ಕಾಮಗಾರಿಗೆ ಸಂಬಂಧಿಸಿದಂತೆ ಸರ್ಕಾರದ ವತಿಯಿಂದ ಹಾಗೂ ಸ್ಥಳೀಯರ ವತಿಯಿಂದ ಒತ್ತಡ ಇದ್ದ ಕಾರಣ, ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿರುವುದಾಗಿ ತಿಳಿಸಿರುತ್ತಾರೆ.

7. ಆದರೆ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪವಿಭಾಗ, ರಾಮದುರ್ಗ ಇವರು ದಿ:27/06/2015ರ ಪತ್ರದಲ್ಲಿ ಕೊಳವೆ ಮಾರ್ಗವನ್ನು ನಿರ್ಮಿಸಲು ಕೆ.ಜುನಿಪೇಟ–ಗೋಣಗನೂರ–ಬಸರಗಿ ರಸ್ತೆ, ಎರಗಟ್ಟಿ–ಮುಧೋಳ ರಾಜ್ಯ ಹೆದ್ದಾರಿ 139ರ ರಸ್ತೆ ಹಾಗೂ ಮುನವಳ್ಳಿ–ಕೊಟಮಚಗಿ ರಾಜ್ಯ ಹೆದ್ದಾರಿ–83ರ ರಸ್ತೆ ಬದಿಯಲ್ಲಿ ಕೊಳವೆ ಮಾರ್ಗವನ್ನು ರಚಿಸುವಲ್ಲಿ ರಸ್ತೆ ಮಧ್ಯದಿಂದ ಕ್ರಮವಾಗಿ 4.50 ಮೀ., 6.00 ಮೀ., ಹಾಗೂ 6.00 ಮೀ., ಅಂತರಲ್ಲಿ ಸದರಿ ಕೊಳವೆ ಮಾರ್ಗ ಅಳವಡಿಸುವ ಷರತ್ತಿನ ಮೇರೆಗೆ ಅನುಮತಿ ನೀಡಲಾಗಿದೆ ಎಂದು ತಿಳಿಸಿರುವುದು ಕಂಡು ಬರುತ್ತದೆ. (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ) ಹಾಗೆಯೇ ದಿ:28/06/2016 ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪವಿಭಾಗ, ರಾಮದುರ್ಗ ಇವರು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಉಪವಿಭಾಗ, ಬೈಲಹೊಂಗಲ ಇವರಿಗೆ ಪತ್ರ ಬರೆದು,

"ರಾಮದುರ್ಗ ಪಟ್ಟಣದ ವರೆಗೆ ಏರು ಕೊಳವೆ ಮಾರ್ಗ ಅಳವಡಿಸಲು ರಸ್ತೆಯ ಪರಿಮಿತಿಯನ್ನು ನಿಗಧಿಪಡಿಸಿ ತಮಗೆ ಅನುಮತಿ ನೀಡಲಾಗಿತ್ತು. ಅದರಂತೆ, ತಮ್ಮ ಕಛೇರಿಯ ಪತ್ರ ಸಂಖ್ಯೆ:852 ದಿ:11/03/2016ರ ಪ್ರಕಾರ ಪೈಪ್ ಲೈನ್ ನಿಗಧಿಪಡಿಸಿದ ರಸ್ತೆ ಪರಿಮಿತಿ ಒಳಗೆ ಅಳವಡಿಸಿರುವ ಲೈನ್‌ಅನ್ನು ಸರಿಪಡಿಸಲು ಹಾಗೂ ಮರಳಿ ಹಾಕಿರುವ ಮಣ್ಣನ್ನು ಗಟ್ಟಿಗೊಳಿಸದೇ ಹಾಕಿರುವುದರಿಂದ, ರಸ್ತೆ ಬದಿ ಮಳೆ ನೀರು ನಿಲ್ಲುತ್ತಿದ್ದು, ಇದರಿಂದ ರಸ್ತೆ ಕುಸಿಯುವ ಸಂಭವಿದ್ದು, ಕೂಡಲೇ ಗಟ್ಟಿಗೊಳಿಸಲು ತಿಳಿಸಲಾಗಿದೆ ಎಂದು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಪೈಪ್‌ಲೈನ್ ಬದಿಯ ರಸ್ತೆ ಕುಸಿದಲ್ಲಿ ತಾವೇ ಜವಾಬ್ದಾರರು ಎಂದು ತಮಗೆ ಪತ್ರ ಬರೆಯಲಾಗಿತ್ತೆಂದು, ನಂತರ ಅಗೆತಕ್ಕೆ ಪೂರಕವಾದ ಹಣವನ್ನು ಸಂದಾಯ ಮಾಡಲು ಮತ್ತು ನ್ಯೂನತೆಗಳನ್ನು ಸರಿಪಡಿಸಲು ಸಹ ಪತ್ರ ಬರೆಯಲಾಗಿತ್ತು. ಹಾಗಯೇ ಈಗಾಗಲೇ ನಿಗಧಿಪಡಿಸಿರುವ ರಸ್ತೆ ಪರಿಮಿತಿಯಲ್ಲಿ ಅಳವಡಿಸುವ ಪೈಪ್‌ಲೈನ್‌ಗಳು ಮುಂದಿನ ದಿನಗಳಲ್ಲಿ ಒಡೆದಲ್ಲಿ ಅಥವಾ ರಸ್ತೆ ಅಗಲೀಕರಣದ ಸಮಯದಲ್ಲಿ ಹಾನಿ ಉಂಟಾದಲ್ಲಿ ತಮ್ಮ ಪಿಡಬ್ಲ್ಯೂಡಿ ಇಲಾಖೆ ಜಬಾಬ್ದಾರರಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ". ಮುಂದುವರೆದು, ರಸ್ತೆಯ ಬಾಹುಗಳ ಅಗೆತವನ್ನು ಮರಳಿ ಮುರ್‍ರಂ ಹಾಕಿ ಗಟ್ಟಿಗೊಳಿಸಬೇಕೆಂದು ಪ್ರತಿ ಮೀಟರ್‌ಗೆ ರೂ.230.04 ರಂತೆ ಒಟ್ಟಾರೆ ರೂ.35,34,600/- ಅನ್ನು ಲೋಕೋಪಯೋಗಿ ಇಲಾಖೆಗೆ ಹಣ ಭರಣ ಮಾಡಲು ತಿಳಿಸಿರುತ್ತಾರೆ. ಹಾಗೂ ಅಲ್ಲಿಯವರೆಗೂ ಕಾಮಗಾರಿಯನ್ನು ಸ್ಥಗಿತಗೊಳಿಸಲು ತಿಳಿಸಿರುತ್ತಾರೆ. ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ.

8. ಎದುರುದಾರರು ದಿ:01/09/2016 ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಉಪವಿಭಾಗ, ರಾಮದುರ್ಗ ಇವರಿಗೆ ಪತ್ರ ಬರೆದಿದ್ದು, ನಿಗಧಿಪಡಿಸಿರುವ ರಸ್ತೆಯ ಬದಿಯಲ್ಲಿ ರಸ್ತೆಯ ಮಧ್ಯದಿಂದ ನಿಗಧಿಪಡಿಸಿರುವ ಅಂತರವನ್ನು ಕಾಯ್ದುಕೊಂಡು ಪೈಪ್‌ಗಳನ್ನು ಅಳವಡಿಸಲು ಸಾಧ್ಯವಾಗಿರುವುದಿಲ್ಲ. 6.00 ಮೀ., ನಿಗಧಿಪಡಿಸಿರುವ ಜಾಗದಲ್ಲಿ 4.50 ಮೀ., ಅಂತರವನ್ನು ಕಾಯ್ದುಕೊಳ್ಳಲಾಗಿದೆ ಎಂದು ಮತ್ತು 6.00 ಮೀ., ಅಂತರವನ್ನು ಕಾಯ್ದುಕೊಳ್ಳಲು ಖಾಸಗಿ ಜಾಗವನ್ನು ಹಾಗೂ ಅರಣ್ಯ ಪ್ರದೇಶವನ್ನು ಬಳಸಿಕೊಳ್ಳಬೇಕಾಗಿದ್ದು, ಅರಣ್ಯ ಇಲಾಖೆಯವರು ಅರಣ್ಯ ಪ್ರದೇಶವನ್ನು ಬಳಸಿಕೊಳ್ಳಲು ನಿರಾಕರಿಸಿರುತ್ತಾರೆಂದು, ಖಾಸಗಿ ಜಾಗದಲ್ಲಿ ಕೊಳವೆಗಳನ್ನು ಅಳವಡಿಸಲು ಭೂಸ್ವಾಧೀನಪಡಿಸಿಕೊಳ್ಳಲು ಅಂದಾಜುಪಟ್ಟಿಯಲ್ಲಿ ಅನುವು ಮಾಡಲು ಅವಕಾಶವಿರುವುದಿಲ್ಲ. ಈ ಯೋಜನೆಯನ್ನು ನಿರ್ಧಿಷ್ಟ ಅವಧಿಯೊಳಗೆ ಪೂರ್ಣಗೊಳಿಸಬೇಕಾಗಿರುತ್ತದೆ. ಅವಶ್ಯಕತೆ ಇರುವ ಭೂಮಿಯನ್ನು ರಾಮದುರ್ಗ ಪುರಸಭೆಯವರು ನೀಡಬೇಕಾಗಿರುತ್ತದೆ. ಆದ್ದರಿಂದ, ಈ ಎಲ್ಲ ಅಂಶಗಳನ್ನು ಪರಿಗಣಿಸಿ ರಾಮದುರ್ಗ ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಕಾಮಗಾರಿಯನ್ನು

ಪೂರ್ಣಗೊಳಿಸಲು ತಾವುಗಳು ಸಹಕರಿಸಬೇಕೆಂದು ಕೋರಿರುವುದು ಕಂಡು ಬಂದಿರುತ್ತದೆ. (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಈ ಪತ್ರದ ಅಂಶವನ್ನು ಪರಿಶೀಲಿಸಿದಲ್ಲಿ ಹಾಗೂ ಈಗಾಗಲೇ ತಿಳಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಎದುರುದಾರರು ತಮಗೆ ನಿಗಧಿಪಡಿಸಿರುವ ರಸ್ತೆಯ ಮಧ್ಯದಿಂದ ಪೈಪ್‌ಗಳನ್ನು ಅಳವಡಿಸುವ ಅಂತರವನ್ನು ಕಾಯ್ದುಕೊಳ್ಳಲು ಸಾಧ್ಯವಾಗದೆ ಇದ್ದಲ್ಲಿ, ಅಂತಹ ವಿಷಯವನ್ನು ಸರ್ಕಾರದ ಗಮನಕ್ಕೆ ತಂದು ಸರ್ಕಾರದ ಅನುಮತಿ ಪಡೆದ ನಂತರ ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುತ್ತದೆ (ಎದುರುದಾರು ತಾವು ನಿರ್ವಹಿಸುತ್ತಿದ್ದ ಪೈಪ್ ಅಳವಡಿಕೆಯ ಕಾಮಗಾರಿಯು ಸರ್ಕಾರದ ಯೋಜನೆಯ ಅನುಷ್ಠಾನಗೊಳಿಸುವ ಕಾಮಗಾರಿಯಾಗಿರುತ್ತದೆ ಎಂದು ತಿಳಿಸಿರುವುದರಿಂದ) ಅಥವಾ ಸ್ಥಳೀಯ ಸಂಸ್ಥೆಗಳ ಪರವಾಗಿ ಆ ಕಾಮಗಾರಿಯನ್ನು ನಿರ್ವಹಿಸುತ್ತಿದ್ದ ಪಕ್ಷದಲ್ಲಿ ತಮಗೆ ಉಂಟಾಗಿರುವ ತೊಂದರೆ ಬಗ್ಗೆ ಅವರ ಗಮನಕ್ಕೆ ತಂದು ಅವರು ತೊಂದರೆಯನ್ನು ನಿವಾರಿಸುವ ವರೆಗೂ ಕಾಮಗಾರಿಯನ್ನು ಸ್ಥಗಿತಗೊಳಿಸಬೇಕಾಗಿರುತ್ತದೆ. ಆದರೆ, ಸರ್ಕಾರದ ಅನುಮತಿಯಾಗಲೀ, ಪಿಡಬ್ಲ್ಯೂಡಿ ಇಲಾಖೆಯ ಅಥವಾ ಅರಣ್ಯ ಇಲಾಖೆಯ ಅನುಮತಿ ಇಲ್ಲದೇ ಎದುರುದಾರರು ಈ ಕಾಮಗಾರಿಯನ್ನು ಕೈಗೊಂಡಿರುವುದು ಕಂಡು ಬರುತ್ತದೆ. ಯೋಜನೆಯ ಅನುಷ್ಠಾನದಲ್ಲಿ ಉಂಟಾಗಿರುವ ತೊಂದರೆಯನ್ನು ರಾಮದುರ್ಗ ಪುರಸಭೆಯವರ ಪರವಾಗಿ ಅವರಿಗಾಗಿ ನಿರ್ವಹಿಸುತ್ತಿದ್ದಲ್ಲಿ ಸದರಿ ರಾಮದುರ್ಗ ಪುರಸಭೆಯವರು ಯೋಜನೆಯನ್ನು ಅನುಷ್ಠಾನಗೊಳಿಸಲು ಉಂಟಾಗಿರುವ ತೊಂದರೆಯನ್ನು ನಿವಾರಿಸಿಕೊಡುವವರೆಗೂ ಕೆಲಸವನ್ನು ಸ್ಥಗಿತಗೊಳಿಸಬೇಕಾಗಿತ್ತು. ಆದರೆ, ಅಂತಹ ಕ್ರಮವನ್ನು ಜರುಗಿಸದೇ ಎದುರುದಾರರು ಯೋಜನೆಯ ಅನುಷ್ಟಾನಗೊಳಿಸಲು ಮುಂದುವರೆದಿರುತ್ತಾರೆ.

9. ಇದಲ್ಲದೇ, ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಬರೆದಿರುವ ದಿ:28/06/2016ರ ಪತ್ರವನ್ನು ಪರಿಶೀಲಿಸಿದಲ್ಲಿ ಕಾಮಗಾರಿಯ ಅನುಷ್ಠಾನದಲ್ಲಿ ನ್ಯೂನತೆಗಳು ಇರುವುದು ಕಂಡು ಬಂದಿರುತ್ತದೆ ಹಾಗೂ ಸದರಿ ನ್ಯೂನತೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ಲೋಕೋಪಯೋಗಿ ಇಲಾಖೆಗೆ ರೂ.35,34,600/- ಅನ್ನು ಭರಿಸುವಂತೆ ತಿಳಿಸಿರುವುದು ಸಹ ಕಂಡು ಬಂದಿರುತ್ತದೆ. ಈ ಪತ್ರವನ್ನು ಪರಿಶೀಲಿಸಿದಲ್ಲಿ ಮುಂದೆ ರಸ್ತೆಯ ಬದಿಯಲ್ಲಿರುವ ಪೈಪುಗಳು ಹಾನಿ ಉಂಟಾಗುವ ಸಂಭವವಿರುವುದು ಸ್ಪಷ್ಟ ಪಡುತ್ತದೆ. ಇದರಿಂದ, ಸರ್ಕಾರಕ್ಕೆ ನಷ್ಟ ಉಂಟಾಗಿರುವುದು ಸಹ ಕಂಡು ಬರುತ್ತದೆ. ಆದ್ದರಿಂದ, ಈ ಕಾಮಗಾರಿಯ ಅನುಷ್ಠಾನದಲ್ಲಿ ಎದುರುದಾರರು ಕರ್ತವ್ಯಲೋಪವೆಸಗಿರುವುದು ಕಂಡು ಬರುತ್ತದೆ.

10. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮಗಳು 1966ರ ನಿಯಮ 3(1)(ii) ಮತ್ತು (iii) ರನ್ವಯ ಎದುರುದಾರರು ಶಿಸ್ತು

ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, **ಎದುರುದಾರರಾದ ಶ್ರೀ ಎನ್. ಪ್ರಸನ್ನ ಮೂರ್ತಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೈಲಹೊಂಗಲ ಉಪವಿಭಾಗ, ಬೈಲಹೊಂಗಲ, ಬೆಳಗಾವಿ ಜಿಲ್ಲೆ, ಪ್ರಸ್ತುತ ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವಿಭಾಗ, ಬೆಳಗಾವಿ** ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 3/4

**(ನ್ಯಾಯಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 04/4/17